

## ಕ್ರೈವೈಸ್ ಗಾರ್ಡನಿಂಗ್

# ಒರಟು ಕಲ್ಲುಗಳಿಗೆ ಹೂ ಸ್ಪರ್ಶ!

**ಕಲ್ಲು–ಮಣ್ಣಲ್ಲೂ ಜೀವ ತುಂಬುವ ನಿಸರ್ಗದ ಮೀನಿಯೇಚರ್‌ನಂತೆ ಕಾಣುವ ಈ 'ಕ್ರೈವೈಸ್ ಗಾರ್ಡನಿಂಗ್' ನೋಡುಗರ ಮನಸೂರೆಗೊಳ್ಳುತ್ತದೆ.**

■ ಸೀಮಾ ಹೆಗಡೆ

ಅದೊಂದು ಮಹಾನಗರಿ; ಕಾಂಕ್ರೀಟ್ ಕಾಲುದಾರಿ–ಡಾಂಬರು ರಸ್ತೆ; ಮಣ್ಣಿನ ಕುರುಹೂ ಇರದ ಕಲ್ಲು ಹಾದಿಯ ಸಂದಿಯಲ್ಲೊಂದು ಕಳೆ ಗಿಡ; ಚಿಕ್ಕ ಹಳದಿ ಹೂ ಬಿಟ್ಟು ಯಾರ ತುಳಿತಕ್ಕೆ ಸಾಯುವೆನೋ ಎಂದು ಎದುರು ನೋಡುತ್ತಿರುತ್ತದೆ. ಪೇಟೆಯ ಹಳೆಯ ಮಣ್ಣಿನ ಗೋಡೆಯ ಮನೆಯ ಬಿರುಕಿನಲ್ಲಿ ಅಶ್ವತ್ಥ ಗಿಡವೊಂದು ಎರಡೆಲೆ ಬಿಟ್ಟು ಇಣುಕುತ್ತಿರುತ್ತದೆ. ಇವುಗಳನ್ನು ನೆಟ್ಟವರಾರೋ, ನೀರೆರೆದವರಾರೋ, ಸಾಕಿ ಸಲಹುವರಾರೋ...

ಯಾರ ಹಂಗಿಲ್ಲದೆ ಬೆಳೆಯುತ್ತಾ ಸಾಗುವ ಸಂದುಗೊಂದಿನ ಈ ಜೀವನ ಇಂದು 'ಕ್ರೈವೈಸ್ ಗಾರ್ಡನ್' ಎಂಬ ಸುಂದರ ಪ್ರಕಾರಕ್ಕೆ ಪ್ರೇರಣೆಯಾಗಿದೆ. ಈ ಗಾರ್ಡನಿಂಗ್ ಕಲೆಯನ್ನು ಜನಪ್ರಿಯಗೊಳಿಸಿದ್ದು ಪ್ರಸಿದ್ಧ 'ಬೊಹೇಮಿಯಾ' ಶೈಲಿಗೆ ತವರಾದ 'ಜೆಕ್ ಗಣರಾಜ್ಯ'.

ಯೂರೋಪಿನ ಒಣ ಶೀತ ಪ್ರದೇಶದ ಎತ್ತರದ 'ಆಲ್ಪೈನ್' ಪರ್ವತ ಶ್ರೇಣಿಯ ಬಂಡೆಗಳಲ್ಲಿ ಬೆಳೆಯುವ ಸಸ್ಯವರ್ಗಗಳಿಂದ ಪ್ರೇರೇಪಿತವಾದ ಈ ಗಾರ್ಡನ್ ಪ್ರಕಾರ 1970ರಲ್ಲೇ ಪ್ರಚಾರದಲ್ಲಿತ್ತು. ಕಾಲ ಸರಿದಂತೆ ಮರೆಯಾಗಿದ್ದ ಈ ಉದ್ಯಾನ ಶೈಲಿ ಇದೀಗ ಮತ್ತೆ ಮುನ್ನೆಲೆಗೆ ಬಂದಿದೆ. ನಗರ ಪ್ರದೇಶದ ಇಕ್ಕಟ್ಟು ಜಾಗಗಳಲ್ಲೂ ಗಿಡ ಬೆಳೆಸಲು ಬಯಸುವ, ಲಭ್ಯ ಜಾಗದಲ್ಲೇ ಪುಟ್ಟದೊಂದು ಉದ್ಯಾನ ಸೃಷ್ಟಿಸಿಕೊಳ್ಳುವ ಹಂಬಲವುಳ್ಳವರು ಇಂಥದ್ದೊಂದು ಪ್ರಕಾರವನ್ನು ಮೆಚ್ಚುತ್ತಿದ್ದಾರೆ. ಕಚೇರಿ ಜಾಗಗಳಿಗೂ ಚೆಂದವಾಗಿ ಒಪ್ಪುವ ಈ ಪ್ರಕಾರಕ್ಕೆ ಕ್ರಿಯಾಶೀಲ ಜೋಡಣೆಯೇ ಅಡಿಪಾಯ. ಹೆಚ್ಚು ಕಾಳಜಿ ಬೇಡದ ಇದರ ಗುಣವೇ ಜನಪ್ರಿಯತೆಗೆ ಕಾರಣ.

ಕಲ್ಲು–ಮಣ್ಣಲ್ಲೂ ಜೀವ ತುಂಬುವ ನಿಸರ್ಗದ ಮಾಯೆಯನ್ನು ಕೃತಕವಾಗಿ ಮರುಸೃಷ್ಟಿಸುವುದು 'ಕ್ರೈವೈಸ್ ಗಾರ್ಡನ್'ನ ವಿಶೇಷ. ಇದೇ ಈಗ ನಗರ ಭಾಗಗಳಲ್ಲಿ ಹೊಸ ವಿಧದ ಗಾರ್ಡನಿಂಗ್ ಪದ್ಧತಿಯಾಗಿ ಚಾಲ್ತಿಯಲ್ಲಿದೆ. ಸುಲಭವಾಗಿ ನಿರ್ಮಿಸಲು ಸಾಧ್ಯವಾದ ಈ ಪ್ರಕಾರಕ್ಕೆ ಮುಖ್ಯವಾಗಿ ಬೇಕಾಗಿರುವುದು ಚಪ್ಪಟೆ ಕಲ್ಲುಗಳು, ಮರಳು, ಜಲ್ಲಿ. ಮಣ್ಣು ಅಗೆದು, ಗುಂಡಿ ತೋಡಿ, ವಿವಿಧ ಸ್ತರದಲ್ಲಿ ಮಣ್ಣು ದಿಬ್ಬಗಳನ್ನು ಮಾಡಿ, ಚಪ್ಪಡಿ ಕಲ್ಲನ್ನು ಮಣ್ಣಿನಲ್ಲಿ ಬಿಗಿಯಾಗಿ ಊರಿ, ಕಲ್ಲುಗಳ ನಡುವೆ ಮಣ್ಣು–ಮರಳನ್ನು ಹಿಸುಕಿ ತುಂಬಿ, ಕೃತಕವಾದ ಕಲ್ಲು ಬೆಟ್ಟವನ್ನು ಮೊದಲು ನಿರ್ಮಿಸಲಾಗುತ್ತದೆ. ನಂತರದಲ್ಲಿ ಅಂದ ಚಂದದ ವಿವಿಧ ಜಾತಿಯ ಚಿಕ್ಕ ಗಿಡಗಳನ್ನು ನೆಡಲಾಗುತ್ತದೆ. ಹೆಚ್ಚು ಜಾಗವಿಲ್ಲ ಎನ್ನುವವರು ಕಂಟೇನರ್‌ಗಳಲ್ಲಿ ಗಿಡಗಳನ್ನು ಬೆಳೆಸಬಹುದು. ಸ್ವಲ್ಪ ದೊಡ್ಡ ಕಂಟೇನರ್‌ಗಳಲ್ಲಿ ಕಲ್ಲುಗಳನ್ನು ಒಪ್ಪವಾಗಿ ಜೋಡಿಸಿ ಸೂಕ್ತ ಸಕ್ಯುಲೆಂಟ್‌ಗಳನ್ನು ಬೆಳೆಸಿದರೆ ಚೆಂದ.

ಕ್ರೈವೈಸ್ ಗಾರ್ಡನಿಂಗ್‌ನಲ್ಲಿ ಗಿಡಗಳ ಆಯ್ಕೆಯೇ ಮುಖ್ಯ. ಬೆಟ್ಟಗಳಲ್ಲಿ ನೈಸರ್ಗಿಕವಾಗಿ ಬಂಡೆಗಳು ಒಂದಕ್ಕೊಂದು ತಾಗಿ ನಿಂತು ನಿರ್ಮಾಣವಾದ ಕಂದರಗಳಲ್ಲಿ ಬೆಳೆಯುವ ಗಿಡಗಳನ್ನೇ ಆರಿಸುವುದು ಒಳ್ಳೆಯದು. ಪ್ರಖರ ಬಿಸಿಲಿಗೆ ಒಗ್ಗಿಕೊಳ್ಳುವ, ನೀರಿನ ಅವಶ್ಯಕತೆ ಕಡಿಮೆ ಇರುವ, ಬೆಟ್ಟ–ಗುಡ್ಡಗಳಲ್ಲಿ ಬೆಳೆಯುವ ಕಳ್ಳಿ, ಲಿಲ್ಲಿ, ಪಾಮ್ಸ್, ಬ್ರೊಮೇಲಿಯಾ, ಸೇಡಮ್ ಇತರೆ ಸಕ್ಯುಲೆಂಟ್‌ಗಳು ಸೂಕ್ತ.

ಈ ಗಾರ್ಡನಿಂಗ್ ಪ್ರಕಾರ ಕೇವಲ ಯೂರೋಪ್‌ನಲ್ಲಲ್ಲದೇ ವಿಶ್ವದೆಲ್ಲ ಭಾಗಗಳಲ್ಲೂ ಪ್ರಚಲಿತವಾಗಿದೆ. ಚಳಿಗಾಲದಲ್ಲಿ ಬೆಚ್ಚಗಿರುವ, ಬೇಸಿಗೆಯಲ್ಲಿ ತಂಪನ್ನು ಕಾಪಾಡಿಕೊಳ್ಳುವ ಚಪ್ಪಡಿ ಕಲ್ಲುಗಳು, ಮಳೆಗಾಲದಲ್ಲಿ ನೀರು ಇಳಿದುಹೋಗುವಂತೆ ಜೋಡಿಸಲಾಗಿರುವ ಕಾರಣ ಎಲ್ಲಾ ಕಾಲಕ್ಕೂ ಇದು ಸೂಕ್ತ. ನೀರಿನ ಅಭಾವವಿದ್ದಲ್ಲಿ ಉತ್ತಮ ಆಯ್ಕೆ. ಬೋನ್ಸಾಯ್ ಟ್ರೇನಲ್ಲಿಯೂ ಕಲ್ಲು ಜೋಡಿಸಿ ಮೀನಿಯೇಚರ್ ಕ್ರೈವೈಸ್ ಗಾರ್ಡನ್ ಮಾಡಬಹುದು.

ಒರಟು ಕಲ್ಲುಗಳ ನಡುವೆ ಮುದ್ದಾದ ಪುಟ್ಟ ಸಸ್ಯವೊಂದು ನಲಿದಾಡಿದರೆ ಎಷ್ಟು ಚಂದವಲ್ಲವೇ? ಕಲ್ಲರಳಿ ಹೂವಾಗಿ ಅಂದರೆ ಇದೇ ಇರಬಹುದೇನೋ!

ಪ್ರತಿಕ್ರಿಯಿಸಿ: feedback@sudha.co.in